ವರದಿಯನ್ನು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವರದಿಯಲ್ಲಿ ಕಿತ್ತೂರನ್ನು ಕೇಂದ್ರಸ್ಥಾನವನ್ನಾಗಿರಿಸಿ ಹೊಸ ತಾಲ್ಲೂಕನ್ನು ರಚಿಸಬಹುದೆಂದು ಶಿಫಾರಸ್ಸು ಮಾಡಲಾಗಿದೆ. ವರದಿಯು ಸರ್ಕಾರದ ಪರಿಶೀಲನೆಯಲ್ಲಿದ್ದು ಅಂತಿಮ ನಿರ್ಣಯ ತೆಗೆದು ಕೊಳ್ಳಬೇಕಿದೆ.

722 ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಜಲಾಶಯದ (ಗರಿಷ್ಠ ಮಟ್ಟ 2079.50ಕ್ಕೆ) ಹಿನ್ನೀರಿನಿಂದ ಮುಳುಗಡೆಯಾದ ಕಾದ್ರೊಳ್ಳಿ ಗ್ರಾಮದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸದರಿ ರೈತರ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪರಿಹಾರವಾಗಿ ನೀಡುವ ಹಣವೆಷ್ಟು;

ಇ) ರೈತರಿಗೆ ನೀಡುವ ಪರಿಹಾರ ಹಣ ಅತೀ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರ ಪರಿಹಾರ ಹಣವನ್ನು ಹೆಚ್ಚಿಗೆ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು.

ಆ) ಕಾದ್ರೊಳ್ಳಿ ಗ್ರಾಮದಲ್ಲಿ ಗರಿಷ್ಠ ಪಾತಳಿಗೆ ಮುಳುಗಡೆಯಾಗತಕ್ಕ ಜಮೀನುಗಳ ಬಗ್ಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿ ಹಂತದಲ್ಲಿದೆ. ಅದರನ್ವಯ ಭೂಸ್ವಾಧೀನ ಕಾಯ್ದೆ ಕಲಂ. 4(1) ರ ಅಧಿಸೂಚನೆಗಿಂತ ಮುಂಚಿನ 3 ವರ್ಷಗಳಲ್ಲಿ ಕಾದ್ರೊಳ್ಳಿ ಗ್ರಾಮದಲ್ಲಿ ಮಾರಾಟವಾದ ಜಮೀನುಗಳ ಅಂಕಿ-ಅಂಶಗಳನ್ನು ಬೈಲಹೊಂಗಲ ಉಪ-ನೋಂದಣಿ ಅಧಿಕಾರಿಗಳು ಪೂರೈಸಿದ್ದು ಅದರನ್ವಯ ಪ್ರತಿ ಎಕರೆಗೆ 38,500/- ರೂ.ಗಳಂತೆ ಮಾರಾಟ ಬೆಲೆ ಆಗುತ್ತದೆ. ಈ ಮೊತ್ತಕ್ಕೆ 30% ಸೊಲೇಶಿಯಂ ಹಾಗೂ 12% ಹೆಚ್ಚುವರಿ ಮಾರುಕಟ್ಟೆ ಬೆಲೆ ಸೇರುತ್ತದೆ.

ಇ) ರೈತರಿಗೆ ನೀಡುವ ಪರಿಹಾರ ಧನವನ್ನು ಕಾನೂನಿನನ್ವಯ ಉಪ-ನೋಂದಣಿ ಅಧಿಕಾರಿಗಳು, ಬೈಲಹೊಂಗಲ ಇವರಿಂದ 4(1) ಅಧಿಸೂಚನೆಯ 3 ವರ್ಷಗಳ ಪೂರ್ವದ ಮಾರಾಟ ಅಂಕಿ-ಅಂಶಗಳ

ಆಧಾರದ ಮೇಲೆ ನಿರ್ಧರಿಸಿದ್ದು, ಸದರಿ ಪ್ರಕರಣಗಳ ಮಂಜೂರಾತಿಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿರುವ ಕಾರಣ ಅದು ಯೋಗ್ಯವಾಗಿರುತ್ತದೆ.

ಈ) ಒಂದು ವೇಳೆ ರೈತರಿಗೆ ನೀಡಲಾದ ಪರಿಹಾರ ಧನವು ಕಡಿಮೆ ಎಂದು ಕಂಡು ಬಂದಲ್ಲಿ ಅವರು ಭೂಸ್ವಾಧೀನ ಕಲಂ 18(1) ರಡಿ ಹೆಚ್ಚಿನ ಪರಿಹಾರ ಕೋರಿ ನ್ಯಾಯಾಲಯದ ಮುಖಾಂತರ ಹೆಚ್ಚುವರಿ ಪರಿಹಾರ ಧನವನ್ನು ಪಡೆಯಲು ಅವಕಾಶವಿರುತ್ತದೆ.

ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನ

952 ಶ್ರೀ ನಾಗೇಂದ್ರ ಬಿ. (ಕೂಡ್ಲಿಗಿ) : ಮಾನ್ಯ ಸಣ್ಣ ಕೈಗಾರಿಕೆಗಳು ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಲೆಕ್ಕ ಶೀರ್ಷಿಕೆ ಯೋಜನೆಗಳ ಅಡಿಯಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ವರ್ಷಾವಾರು ವಿವರ ನೀಡುವುದು;

ಆ) ಹಾಗಿದ್ದಲ್ಲಿ, ಇಲಾಖೆಯ ಯೋಜನೆಗಳಾವುವು? ಈ ಯೋಜನೆಗಳ ಲಾಭ ಪಡೆದ ಫಲಾನುಭವಿಗಳಿಗೆ ಬಿಡುಗಡೆಯಾದ ಅನುದಾನ ಮತ್ತು ಕಳೆದ ಮೂರು ವರ್ಷಗಳ ವಿವರ ನೀಡುವುದು.

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆಗಳು ಹಾಗೂ ರೇಷ್ಮೆ ಸಚಿವರು):

ಅ) ರೇಷ್ಮೆ ಇಲಾಖೆ

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಿಂದ, ವಿವಿಧ ಲೆಕ್ಕ ಶೀರ್ಷಿಕೆ ಯೋಜನೆಗಳ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆಗಳು	2006–07	2007–08	2008–09
1	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	8.07	9.16	10.23
2	ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು	0.93	1.75	2.00
3	ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳು	16.76	1.50	18.87